'ಸರಿಯಾಗಿವೆ' ಎಂದು ಅನಿಸಿದ್ದರಿಂದ ನಾನೂ ಈ ಪ್ರಕಾರಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಿ ಕಾವ್ಯ ಬರೆದೆ. ಆದರೆ, ನಿಧಾನವಾಗಿ ಇದು ನನಗೆ 'ಅನ್ಯರೊರೆದುದನೆ ಬರೆಬರೆದು ಬಿನ್ನವಾಗಿದೆ ಮನವು' ಎಂದು ಅಡಿಗರು ಹೇಳಿದ ಹಾಗೆ ಅನಿಸತೊಡಗಿತು. ಆ ಸುಮಾರಿಗೆ ಅಲ್ಲಮ ಮತ್ತು ವಚನ ಸಾಹಿತ್ಯ ನನ್ನ ಅಧ್ಯಯನದ ವಿಷಯವಾಗಿತ್ತು. ಅದು ನನಗೆ ಹೆಚ್ಚು 'ಹತ್ತಿರ' ಅನಿಸಿತು. ಆ ನೆಲೆಯಲ್ಲಿ ನನ್ನ 'ಇದಲ್ಲ ಇದಲ್ಲ', 'ಇಹಪರದ ಕೊಳ', 'ಕಾಮನೆಯ ಬೆಡಗು', 'ದೇವರು ಮತ್ತೆ ಮತ್ತೆ', 'ಬೇಲಿಯ ಗೂಟದ ಮೇಲೊಂದು ಚಿಟ್ಟೆ' ಮೊದಲಾದ ಸಂಗ್ರಹಗಳು ಬಂದವು.

ಕಾಲಕಾಲಕ್ಕೆ ಸ್ಪಂದಿಸುವುದು ಮತ್ತು ತಾನು ಬರೆದ ಕವಿತೆಗಳನ್ನು ಮತ್ತೆ ಮತ್ತೆ ಮುರಿದು ಕಟ್ಟುವುದು ಕವಿಗಳಲ್ಲಿ ಇರಬೇಕಾದ ಗುಣ ಎಂದು ನನ್ನ ನಂಬಿಕೆ. ಅಡಿಗರ ನಂತರದ ಬಹುಮುಖ್ಯ ಕವಿಯಾದ ಕೆ.ವಿ. ತಿರುಮಲೇಶರು ಹೀಗೆ ಮುರಿದು ಕಟ್ಟುವುದರಲ್ಲಿ ಅದ್ಭುತ ಯಶಸ್ಸು ಗಳಿಸಿದ್ದರು ಎನ್ನುವುದು ನನಗೆ ಪ್ರೇರಣೆ. ಹಾಗಾಗಿ, ಎಲ್ಲ ಕಾಲದ ಕಾವ್ಯಪ್ರಕಾರಕ್ಕೆ ನಾನು ಸ್ಪಂದಿಸಿದ್ದೇನೆ ಅಥವಾ ಆಯಾ ಕಾಲದಲ್ಲಿ ನನ್ನ ಕವಿತೆಗಳ ಮೇಲೆ ಅವು ಪ್ರಭಾವ ಬೀರಿವೆ ಎನ್ನುವುದು ಸತ್ಯ.

**◆ ಮನೆ ಭಾಷೆ ಮಲೆಯಾಳವನ್ನೂ, ಸಂಪರ್ಕ ಭಾಷೆಯಾಗಿ ತುಳುವನ್ನೂ ಚೆನ್ನಾಗಿ ಬಲ್ಲ ನಿಮ್ಮ ಬರಹಗಳು ಹಲವು ನೆರೆ ಭಾಷೆಗಳಿಗೆ ಅನುವಾದಗೊಂಡಿವೆ. ಗಮಕ-ಶಿಲ್ಪಕಲೆ ಕ್ಷೇತ್ರಗಳಿಗೂ ಪ್ರಶಸ್ತಿ ಕೊಡುವ ನಿಮಗೆ ಅನುವಾದಕರನ್ನೂ ಗುರುತಿಸುವ ಅಗತ್ಯವಿದೆಯೆಂದು ಏಕೆ ಅನಿಸಲಿಲ್ಲ? ಇದು ಅನುವಾದದ ಕುರಿತಾದ ನಿಮ್ಮ ಧೋರಣೆಯನ್ನು ಸೂಚಿಸುತ್ತಿದೆಯೆಂದು ಭಾವಿಸಬಹುದೆ?**

ನನ್ನ ಮಾತೃಭಾಷೆ ಮಲೆಯಾಳ ಅಲ್ಲ. ನಾನು ಹುಟ್ಟಿದ್ದು ಶುದ್ಧ ಕನ್ನಡದ ನೆಲವಾದ ಕಾಸರಗೋಡಿನ ಕೋಳ್ಯೂರಿನಲ್ಲಿ. ಆಗ ಮದ್ರಾಸ್ ಪ್ರಾಂತ್ಯಕ್ಕೆ ಅದು ಸೇರಿತ್ತು. ಭಾಷಾವಾರು ಪ್ರಾಂತ್ಯರಚನೆಯಾದಾಗ ಕೇರಳಕ್ಕೆ ಅದು ಸೇರಿಹೋಯಿತು ಅಷ್ಟೇ. ಆದರೂ, ನಾನು ಹುಟ್ಟಿದ ಊರಲ್ಲಿ ಈಗಲೂ ಚಲಾವಣೆಯಲ್ಲಿರುವುದು ಕನ್ನಡವೇ. ನಾನು ಆ ಊರು ಬಿಟ್ಟು ಸುಮಾರು 80 ಕಿ.ಮೀ. ದೂರದ ಕಾಂತಾವರಕ್ಕೆ ಬಂದೆ. ವರುಷಕ್ಕೊಂದೆರಡು ಬಾರಿ ಹುಟ್ಟಿದ ಊರಿಗೆ ಹೋಗುತ್ತೇನೆ. ಆದರೂ, ಮಲೆಯಾಳದ ಸಂಪರ್ಕ ನನಗೆ ಇಲ್ಲವೇ ಇಲ್ಲ! ನನ್ನ ಅಣ್ಣಂದಿರಿಗೆ ಮತ್ತು ಕುಟುಂಬದವರಿಗೂ ಮಲೆಯಾಳದ ಹೊಕ್ಕು ಬಳಕೆ ಇಲ್ಲ. ನನ್ನ ಅಣ್ಣನ ಮಗ ಕಾಸರಗೋಡಿನಲ್ಲಿ ವಕೀಲನಾಗಿರುವುದರಿಂದ ಅವನಿಗೆ ಮಲೆಯಾಳವು ಕನ್ನಡದಷ್ಟೇ ಚೆನ್ನಾಗಿ ಗೊತ್ತು.

ಇನ್ನು ನನ್ನ ಕೃತಿಗಳನ್ನು ನಾನು ಯಾರನ್ನೂ ಒತ್ತಾಯಿಸಿ ಬೇರೆ ಭಾಷೆಗಳಿಗೆ ಅನುವಾದಿಸಲು ಹೇಳಿದ್ದಿಲ್ಲ. ನನ್ನ ಸ್ನೇಹಿತರಲ್ಲಿ ಬಹುಭಾಷಿಕರು ಇರುವುದರಿಂದ ಅವರು ಸಹಜವಾಗಿ ನನ್ನ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಿದರು. 'ನನ್ನದಲ್ಲದ್ದು'ವನ್ನು ಕೆ.ಕೆ. ನಾಯರ್ ಮಲೆಯಾಳಕ್ಕೆ, 'ಉಲ್ಲಂಘನೆಯನ್ನು ಎಂ.ಎಸ್. ಪೆಜತ್ತಾಯರು ಇಂಗ್ಲೀಷಿಗೆ, ಪ್ರೊ. ಎನ್.ಟಿ. ಭಟ್ಟರು 'ಮುಖಾಂತರ' ಮತ್ತು 'ಧರ್ಮ'ಯುದ್ಧವನ್ನು ಇಂಗ್ಲೀಷಿಗೆ, ಧರಣೇಂದ್ರ ಕುರುಕುರಿಯವರು 'ದೃಷ್ಟಿ'ಯನ್ನು ಹಿಂದಿಗೆ, ನಲ್ಲಿಮೆಲ ಭಾಸ್ಕರ ರಾವ್ 'ತೊಟ್ಟಿ'ಯನ್ನು ಮತ್ತು ಶಾಖಮೂರು ರಾಮಗೋಪಾಲ ಅವರು 'ಉಲ್ಲಂಘನೆ'ಯನ್ನು ತೆಲುಗಿಗೆ, ಉಮಾ ಕುಲಕರ್ಣಿಯವರು 'ಉಲ್ಲಂಘನೆ'ಯನ್ನು ಮರಾಠಿಗೆ ಅನುವಾದಿಸಿದ್ದಾರೆ. ಶಿವಮೊಗ್ಗದ ಡಿ.ಎಸ್. ಶ್ರೀನಾಥ್ ಅವರು ನನ್ನ ಅನೇಕ ಕವನಗಳನ್ನು ಹಿಂದಿಗೆ ಅನುವಾದಿಸಿ, ಕೇಂದ್ರ ಸಾಹಿತ್ಯ ಅಕಾಡಮಿಯು ಪ್ರಕಟಿಸುವ ತ್ರೈಮಾಸಿಕದಲ್ಲಿ ಪ್ರಕಟಿಸಿದ್ದಾರೆ ಮತ್ತು ನನ್ನ ಒಂದು ಹಿಂದಿ ಕವನ ಸಂಕಲನವನ್ನೂ ಹೊರತಂದಿದ್ದಾರೆ. ಈ ಅನುವಾದಗಳ ಹಿಂದೆ ಇದ್ದದ್ದು ಕೇವಲ ಪ್ರೀತಿ, ಆರ್ಥಿಕವಾದ ಲಾಭ ಅಲ್ಲ.

ಕಾಂತಾವರ ಕನ್ನಡ ಸಂಘದಲ್ಲಿ ಈಗ ಹನ್ನೆರಡು ದತ್ತಿಗಳ ಮೂಲಕ ಬೇರೆ ಬೇರೆ ಸಾಹಿತ್ಯ ಪ್ರಕಾರಕ್ಕೆ (ಕಾದಂಬರಿ, ಲಲಿತಪ್ರಬಂಧ, ಅನುವಾದವನ್ನು ಹೊರತುಪಡಿಸಿ) ನಾವು ಪ್ರಶಸ್ತಿಗಳನ್ನು ಕೊಡುವುದು ನಿಜ. ನಮ್ಮ ಎಲ್ಲಾ ದತ್ತಿ ಪ್ರಶಸ್ತಿಗಳು ದತ್ತಿ ದಾನಿಗಳ ಪ್ರಾಯೋಜಕರಿಂದ ನಡೆಯುತ್ತಿದ್ದು, ಪುನರೂರು ಅವರು ಕಳೆದ 33 ವರುಷಗಳಿಂದ ಮುದ್ದಣ ಕಾವ್ಯ